# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,<br>ಬಿ.ಟಿ.ಎಂ.ಲೇಔಟ್ ಉಪ ವಿಭಾಗ,<br>16ನೇ ಮುಖ್ಯರಸ್ತೆ, ಬಿ.ಟಿ.ಎಂ.1ನೇ ಹಂತ,<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು-29. |

## ವಾರ್ಡ್ ಸಮಿತಿ ಸಭೆಯ ಸೂಚನಾ ಪತ್ರ

ವಿಷಯ:- ವಾರ್ಡ್ ಸಮಿತಿ ಸಭೆಯನ್ನು ನಡೆಸುವ ಬಗ್ಗೆ

ಉಲ್ಲೇಖ:1) ಘನ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂಪಿ 24739/2012.
ದಿನಾಂಕ: 10.11.2017

2) ಕೇಂದ್ರ ಕಛೇರಿ ಆದೇಶ ಸಂಖ್ಯೆ: ಬಿ12(5)/ಪಿಆರ್/35/2020-21,
ದಿನಾಂಕ: 21.09.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳಂತೆ ಪ್ರತಿ ಮಾಹೆಯ 1ನೇ ಮತ್ತು 3ನೇ ಶನಿವಾರ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಬೇಕಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣವಲಯದ ವಾರ್ಡ್ ಸಂಖ್ಯೆ:176 ಬಿ.ಟಿ.ಎಂ ಲೇಔಟ್, 9ನೇ ಮುಖ್ಯರಸ್ತೆಯ ಬಿ.ಟಿ.ಎಂ 2ನೇ ಹಂತದ ಕೆಂಪೇಗೌಡ ಆಟದ ಮೈದಾನದಲ್ಲಿರುವ ಬಿ.ಬಿ.ಎಂ.ಪಿ ಕಛೇರಿಯಲ್ಲಿ ಸಭೆಯನ್ನು ದಿನಾಂಕ: 02.01.2021ರ ಬೆಳಿಗ್ಗೆ 11:00 ಗಂಟೆಗೆ ನಿಗದಿಪಡಿಸಲಾಗಿದ್ದು, ವಾರ್ಡ್ ಸಮಿತಿ ಸದಸ್ಯರು ಹಾಗೂ ವಾರ್ಡ್ ಸಂಖ್ಯೆ 176 ಬಿ.ಟಿ.ಎಂ ಲೇಔಟ್‌ಗೆ ಸಂಬಂಧಿಸಿದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಲು ಈ ಮೂಲಕ ಕೋರುತ್ತೇನೆ.

**:ಸಭಾ ಅಜೆಂಡಾ:**

| | |
|---|---|
| 1) | ಹಿಂದಿನ ಸಭೆಯ ನಡುವಳಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2) | ಕೋವಿಡ್-19 ರ ಬಗ್ಗೆ ಚರ್ಚಿಸುವುದು |
| 3) | ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ |
| 4) | ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ |
| 5) | ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳ ಬಗ್ಗೆ ಚರ್ಚೆ |

31/12/2020

ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಲೇಔಟ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ರವರಿಗೆ :-**

1) ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು(ಘ.ತ್ಯಾ.ನಿ.ಅ.ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ ವಿಭಾಗ ಎಸ್-16 ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಉಪ ವಿಭಾಗ ಎಸ್-6 ಬೆಂಗಳೂರು ನೀರುಸರಬರಾಜು ಮಂಡಳಿ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
5) ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
6) ಆರೋಗ್ಯ ವೈದ್ಯಾಧಿಕಾರಿಗಳು ಬಿ.ಟಿ.ಎಂ ಲೇಔಟ್ ವಿಭಾಗದವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
7) ಸಹಾಯಕ ಕಂದಾಯ ಅಧಿಕಾರಿಗಳು ಬಿ.ಟಿ.ಎಂ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಉಪವಿಭಾಗ ದಕ್ಷಿಣ ವಲಯ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
9) ಆರಕ್ಷಕ ಉಪನಿರೀಕ್ಷಕರು ಮೈಕೋ ಲೇಔಟ್ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
10) ಆರಕ್ಷಕ ಉಪನಿರೀಕ್ಷಕರು ಸಂಚಾರಿ ಪೊಲೀಸ್ ಠಾಣೆ ಮೈಕೋ ಲೇಔಟ್ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

Scanned with CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-176 ಬಿ.ಟಿ.ಎಂ ಬಡಾವಣೆ ಕಛೇರಿಯಲ್ಲಿ ದಿನಾಂಕ: 02.01.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಬಿ.ಎಂ.,ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿಆರ್/35/2020-21/21-09-2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ.ವೆಂಕಟೇಶ್.ಎಸ್, ಐ.ಆರ್.ಎಸ್, ಜಂಟಿ ಆಯುಕ್ತರು, ಹಣಕಾಸು, ಬಿ.ಬಿ.ಎಂ.ಪಿ.ರವನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ/ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ**

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ವೆಂಕಟೇಶ್.ಎಸ್, ಜಂಟಿ ಆಯುಕ್ತರು, ಹಣಕಾಸು ಬಿ.ಬಿ.ಎಂ..ಪಿ. | 9480685634 |
| 2 | ಶ್ರೀ.ನರೇಶ್‌ಕುಮಾರ್.ಕೆ ಸ.ಇಂ-176 ವಾರ್ಡ್ | 9844407499 |
| 3 | ಶ್ರೀ ರಘುನಾಥ್.ಟಿ ಕಂದಾಯ ಪರಿವೀಕ್ಷಕರು | 9164691098 |
| 4 | ಶ್ರೀ. ಪ್ರಹ್ಲಾದ್,ಕಿರಿಯ ಆರೋಗ್ಯ ಪರಿವೀಕ್ಷಕರು | 9972320005 |
| 5 | ಶ್ರೀ. ಮಲ್ಲಿಕಾರ್ಜುನ ಹಿರಿಯ ಆರೋಗ್ಯ ಪರಿವೀಕ್ಷಕರು | 9480685601 |
| 6 | ಶ್ರೀ.ಶರಣಪ್ಪ ಮಾರ್ಷಲ್ | 7483316635 |
| 7 | ಶ್ರೀ. ನರೇಂದ್ರಬಾಬು ಅರಣ್ಯ ಇಲಾಖೆ | 9480685399 |
| 8 | ಶ್ರೀ.ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ ವೇದಿಕೆ | 9900111391 |
| 9 | ಮುನಿರಾಜು ಸ್ಯಾನಿಟರಿ ದಫೇದಾರ | 9844884555 |
| 10 | ಶ್ರೀ ಚಿಟ್ಟಿ | 9844485981 |

* * * * * *

ದಿನಾಂಕ-02-01-2021ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ಗೋಪಾಲಕೃಷ್ಣ ರವರು ಬಿ.ಟಿ.ಎಂ 2ನೇ ಹಂತದ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳಲ್ಲಿ ಕಸ ಮತ್ತು ಇತರೆ ಅನುಪಯುಕ್ತ ವಸ್ತುಗಳನ್ನು ಸಾರ್ವಜನಿಕರು ಹಾಕುತ್ತಿದ್ದು ಹಾಗೂ ಇತರ ಗಿಡಗಳು ಬೆಳೆದು ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಮಾಲೀಕರ ವಿರುದ್ಧ ಕ್ರಮವಹಿಸುವಂತೆ ಕೋರಿದರು.

ಈ ಬಗ್ಗೆ ಸಹಾಯಕ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಈಗಾಗಲೇ ಖಾಲಿ ನಿವೇಶನಗಳ ವಿವರವನ್ನು ಸಂಬಂಧಿಸಿದ ಕಂದಾಯ ಇಲಾಖೆಯಿಂದ ಪಡೆದುಕೊಂಡಿದ್ದು ಮಾನ್ಯ ಆಯುಕ್ತರ



Scanned with CamScanner

ಆದೇಶದಂತೆ ಪ್ರತಿ ಚದರ ಅಡಿಗೆ ರೂ, 2/– ಗಳಂತೆ ದಂಡ ವಿಧಿಸಿ ಕ್ರಮ ವಹಿಸಲಾಗುತ್ತಿರುತ್ತದೆಯೆಂದು ಸಭೆಗೆ ತಿಳಿಸಿದರು.

2. **ಅರಣ್ಯ ಇಲಾಖೆಯ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ಗೋಪಾಲಕೃಷ್ಣ 27ನೇ ಮುಖ್ಯರಸ್ತೆಯ ಬೀದಿ ದೀಪಗಳ ಸುತ್ತಾಮುತ್ತಾ ಮರದ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸಲು ಕೋರಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆರವರು ಮಾತನಾಡಿ ಕೂಡಲೇ ಕ್ರಮವಹಿಸುವುದಾಗಿ ತಿಳಿಸಿದರು. ಹಾಗೂ ಈ ವಿಷಯದ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡಿ ಕತ್ತರಿಸಿದ ಮರದ ಕೊಂಬೆಗಳ ಎಲೆಗಳನ್ನು ಘ.ತ್ಯಾನಿ ರವರು ತೆರವುಗೊಳಿಸುವಂತೆಯು ಹಾಗೂ ಇತರೆ ದೊಡ್ಡದಾದ ಮತ್ತು ಸಣ್ಣ ಪ್ರಮಾಣದ ಮರದ ದಿಂಬಿಗಳನ್ನು ಅರಣ್ಯ ಇಲಾಖೆ ರವರು ತೆರವುಗೊಳಿಸಬೇಕಾಗಿದ್ದು ಈ ಬಗ್ಗೆ ಕ್ರಮವಹಿಸಲು ಕೋರಿದರು.

**ಶ್ರೀ. ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ** ವೇದಿಕೆ ರವರು ಮಾತಾನಾಡಿ ಸ್ವತ್ತಿನ ಸಂಖ್ಯೆ 653,631,632,630 28ನೇ ಮುಖ್ಯರಸ್ತೆ ಈ ಕಟ್ಟಡಗಳ ಮುಂಬಾಗದಲ್ಲಿರುವ ಮರಗಳ ಒಣಗಿದ, ರೋಗಪೀಡಿತ ಮತ್ತು ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ಗುರುತಿಸಿ ಕೂಡಲೇ ತೆರವುಗೊಳಿಸುವಂತೆ ಈ ಹಿಂದೆ ಕೋರಿದ್ದ ದೂರು ಪರಿಹಾರವಾಗಿದೆ ಎಂದು ತಿಳಿಸಿ ಧನ್ಯವಾದಗಳನ್ನು ತಿಳಿಸಿದರು

3. **ಬೆಸ್ಕಾಂ ಇಲಾಖೆ ಬಗ್ಗೆ.**

**ಸಹಾಯಕ ಅಭಿಯಂತರರು** ರವರು ಬೆಸ್ಕಾಂ ಇಲಾಖೆಯ ಸಹಾಯಕ ಅಭಿಯಂತರರೊಂದಿಗೆ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಅಥವಾ ಪಾದಚಾರಿ ಮಾರ್ಗವನ್ನು ಅಗೆಯುವ ಮುನ್ನ ಬಿ.ಬಿ.ಎಂ.ಪಿ ವತಿಯಿಂದ ಅನುಮತಿ ಪಡೆದು ರಸ್ತೆ ಅಗೆಯುವಂತೆ ತಿಳಿಸಿದರು ಹಾಗೂ 16ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತ ರಸ್ತೆಗಳಲ್ಲಿ ಅಗೆದಿರುವ ಗುಂಡಿಗಳನ್ನು 1 ವಾರದೊಳಗಾಗಿ ವೈಜ್ಞಾನಿಕವಾಗಿ ಮುಚ್ಚಿ ಕ್ರಮವಹಿಸುವಂತೆ ತಿಳಿಸಿದರು.

**ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

02/01/2024

ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ



Scanned with CamScanner